**VIJAYAVANI (KANNADA DAILY)**

Date: Wednesday, February 12, 2014 | Page: 2

Edition: Mysore | Language: Kannada

# ಅಭಿವೃದ್ಧಿಗೆ ದೇಸೀಯತೆ ಬಳಸಿ: ಮಷೇಲ್ಕರ್

**ಮೈಸೂರು:** ಅಭಿವೃದ್ಧಿ ವಿಷಯದಲ್ಲಿ ಪಾಶ್ಚಿಮಾತ್ಯ ಮಾದರಿಯ ಅಂಧಾನುಕರಣೆ ಬೇಡ. ದೇಸಿ ಕೌಶಲ್ಯ, ತಂತ್ರಜ್ಞಾನ ಮತ್ತು ಮಾದರಿಗಳಿಗೆ ಒತ್ತು ನೀಡಿ ಎಂದು ಗ್ಲೋಬಲ್ ರಿಸರ್ಚ್ ಅಲೈಯನ್ಸ್ ಅಧ್ಯಕ್ಷ ಡಾ.ಆರ್.ಎ. ಮಷೇಲ್ಕರ್ ಸಲಹೆ ನೀಡಿದರು.

ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್‌ನಲ್ಲಿ ಮಂಗಳವಾರ ನಡೆದ 'ನಾಯಕತ್ವ; ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ನಿರ್ವಹಣೆ' ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜನರಿಗೆ ತಲುಪಿದಾಗಷ್ಟೇ ಪ್ರತಿಯೊಂದು ಸಂಶೋಧನೆ ಅಥವಾ ಅನ್ವೇಷಣೆಗೆ ಸಾರ್ಥಕತೆ ಲಭಿಸುತ್ತದೆ. ಈ ಹಿಂದೆ ಕೃತಕ ಕಾಲಿನ ಬೆಲೆ 74 ಸಾವಿರ ರೂ. ನಷ್ಟಿತ್ತು. ಆದರೆ, ಜೈಪುರ ಕೃತಕ ಕಾಲಿನ ಅನ್ವೇಷಣೆ ಫಲವಾಗಿ ಈಗ ಇದರ ಬೆಲೆ ಕೇವಲ 1,700 ರೂ. ಆಗಿದೆ. ಸಂಶೋಧನೆ ಜನಸಾಮಾನ್ಯರಿಗೆ ತಲುಪಿದಾಗ ಸಮಾನತೆ ಸಾಧಿಸಲು ಸಾಧ್ಯ. ಉತ್ಕೃಷ್ಟ ಮಟ್ಟದ ಅನ್ವೇಷಣೆಯಿಂದ ಮಾತ್ರ ಉತ್ತಮ ಸ್ಪರ್ಧೆ ಏರ್ಪಡಲಿದೆ ಎಂದು ಅಭಿಪ್ರಾಯಪಟ್ಟರು.

ಸಂಶೋಧನೆ ಮಾಡಲು ವಿದ್ಯಾರ್ಥಿಗಳು ಓದು ಮುಗಿಯುವವರೆಗೆ ಕಾಯುವ ಅಗತ್ಯವಿಲ್ಲ. ಆಸಕ್ತಿದಾಯಕ ಕ್ಷೇತ್ರದಲ್ಲಿ ಇಚ್ಛೆಗೆ ಅನುಗುಣವಾಗಿ ಸಂಶೋಧನೆ ಕೈಗೊಳ್ಳಬೇಕು. ಆಗ ಹೊಸ ಚಿಂತನೆ, ಆಲೋಚನೆಯೊಂದಿಗೆ ಸಂಶೋಧನೆಗೆ ಫಲ ಸಿಗುವ ಸಾಧ್ಯತೆ ಇದೆ. ಇಂತಹ ಹೊಸ ಅನ್ವೇಷಣೆಯಿಂದಲೇ ದೇಶಾಭಿವೃದ್ಧಿ, ಸಮಾಜದಲ್ಲಿ ಸುಧಾರಣೆ ತರಲು ಸಾಧ್ಯ. ಇಂದು ಜಪಾನ್, ಯುರೋಪ್ ರಾಷ್ಟ್ರಗಳು ಸಂಶೋಧನೆಯಲ್ಲಿ ಮುಂಚೂಣಿಯಲ್ಲಿವೆ. ಹೀಗಾಗಿ, ಭಾರತದಲ್ಲೂ ಅನ್ವೇಷಣೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ದೇಶಾಭಿವೃದ್ಧಿಗೆ ನೆರವಾಗಬೇಕಿದೆ ಎಂದರು. ಪ್ರಾಂಶುಪಾಲ ಡಾ.ಎನ್.ಆರ್. ಪರಶುರಾಮನ್, ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಎಸ್‌ಡಿಎಂ-ಐಎಂಡಿ ಕಾಲೇಜಿನಲ್ಲಿ ಡಾ.ಆರ್.ಎ.ಮಷೇಲ್ಕರ್ ಉಪನ್ಯಾಸ ನೀಡಿದರು.